(ಅ) ಮತ್ತು (ಆ) ಒಂದು ಜೊತೆ ಎತ್ತು/ಕೋಣ ಶೇ. 50%–ಗರಿಷ್ಠ ರೂ.10,000

ಬಂಡಿ ಶೇ. 50%–ಗರಿಷ್ಠ ರೂ.10,000.

(ಇ) ಯಾರೂ ಇಲ್ಲ.

(ಈ) ಹೌದು, ಒಬ್ಬ ಫಲಾನುಭವಿಗೆ ಎತ್ತು ಅಥವಾ ಎತ್ತಿನ ಗಾಡಿ ಇವುಗಳಲ್ಲಿ ಯಾವುದಾದರೊಂದನ್ನು ನೀಡಲಾಗಿದೆ.

(ಉ) 2006–07 ರೂ. 2000.00 ಲಕ್ಷಗಳು, 2007–08 ರೂ. 5000.00 ಲಕ್ಷಗಳು.

**769 (301) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು)** :–ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) 2007–08 ನೇ ಆಯವ್ಯಯದಲ್ಲಿ ಎಂ–ಕೆ ಹುಬ್ಬಳ್ಳಿ ಹತ್ತಿರ ಮಲಪ್ರಭ ನದಿಯಲ್ಲಿರುವ ಗಂಗಾಂಬಿಕಾ ದೇವಸ್ಥಾನ ಅಭಿವೃದ್ಧಿಗೆ ಘೋಷಣೆ ಮಾಡಿದ್ದು ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಾಮಗಾರಿ ಯಾವಾಗ ಪ್ರಾರಂಭ ಮಾಡಲಾಗುವುದು ;

(ಇ) ಈ ಕಾಮಗಾರಿಯ ಅಂದಾಜು ವೆಚ್ಚ ಹಾಗೂ ರೂಪರೇಷೆಗಳ ಬಗ್ಗೆ ಮಾಹಿತಿ ನೀಡುವುದು ?

**ಶ್ರೀ ಜಗದೀಶ್ ಶೆಟ್ಟರ್** (ಕಂದಾಯ ಸಚಿವರು) :–

(ಅ) ಬಂದಿದೆ.

(ಆ) ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಅಂತಿಮಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

(ಇ) ಮೊದಲ ಹಂತದ ಕಾಮಗಾರಿಯ ಅಂದಾಜು ವೆಚ್ಚ ರೂ. 3,47,60,000/– ಈ ಹಂತದಲ್ಲಿ ಕೆಳಕಂಡ ಕಾಮಗಾರಿಗಳು ಒಳಗೊಂಡಿವೆ ;–

(1) ಮೂಲ ದೇವಸ್ಥಾನದ ಪುನರ್ ನಿರ್ಮಾಣ ಹಾಗೂ ಅದರ ಸಂರಕ್ಷಣೆ ಮತ್ತು ಸೌಂದರೀಕರಣಗೊಳಿಸುವುದು.

(2) ದೇವಸ್ಥಾನದ ಸುತ್ತಲೂ ವರ್ತುಲಾಕಾರದಲ್ಲಿ ಆರ್‌ಸಿಸಿ ಗೋಡೆ ನಿರ್ಮಿಸುವುದು.

(3) ದೇವಸ್ಥಾನಕ್ಕೆ ಹೋಗಲು ಉತ್ತರ ದಿಕ್ಕಿನಲ್ಲಿ ಸಂಪರ್ಕ ಸೇತುವೆ ನಿರ್ಮಾಣ ಮಾಡುವುದು.

ಉಳಿದ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.

**771 (934) ಶ್ರೀ ವಿಶ್ವನಾಥ ಹೆಚ್.ಎಂ.** (ಸಕಲೇಶಪುರ) :–ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) 2006 ನೇ ಸಾಲಿನಲ್ಲಿ ಸಕಲೇಶಪುರ ತಾಲ್ಲೂಕಿಗೆ ಕೃಷಿ ಇಲಾಖಾವತಿಯಿಂದ ರೈತರು ಎತ್ತು–ಗಾಡಿ ಕೊಳ್ಳಲು ನಿಗದಿಪಡಿಸಲಾದ ಧನ ಸಹಾಯವೆಷ್ಟು ;

(ಆ) 2006 ನೇ ಸಾಲಿನ ಫಲಾನುಭವಿಗಳ ಪಟ್ಟಿಯನ್ನು ಸಹಾಯಕ ನಿರ್ದೇಶಕರಿಗೆ ನೀಡಿದ್ದರೂ ಫಲಾನುಭವಿಗಳಿಗೆ ಧನ ಸಹಾಯ ನೀಡದಿರಲು ಕಾರಣವೇನು ;

(ಇ) ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟವರ ವಿರುದ್ಧ ಸರ್ಕಾರದ ಕ್ರಮವೇನು ?

**ಶ್ರೀ ಬಂಡೆಪ್ಪ ಕಾಶಂಪೂರ** (ಕೃಷಿ ಸಚಿವರು) :–

(ಅ) 2006–07 ನೇ ಸಾಲಿನಲ್ಲಿ ಸಕಲೇಶಪುರ ತಾಲ್ಲೂಕಿಗೆ ಎತ್ತು–ಗಾಡಿ ಕೊಳ್ಳಲು ನಿಗದಿಪಡಿಸಲಾದ ಸಹಾಯಧನ ರೂ. 6.00 ಲಕ್ಷ.

(ಆ) ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕು ಮಟ್ಟದ ಸಮಿತಿ ಅನುಮೋದಿಸಿದ್ದರೂ ಸಹ ಪ್ರಭಾರ ಸಹಾಯಕ ಕೃಷಿ ನಿರ್ದೇಶಕರು, ಸಕಲೇಶಪುರ ಇವರು ಸಕಾಲದಲ್ಲಿ ಅಗತ್ಯ ಕ್ರಮ ಕೈಗೊಳ್ಳದಿರುವುದರಿಂದ 2006–07 ನೇ ಸಾಲಿನಲ್ಲಿ ಫಲಾನುಭವಿಗಳಿಗೆ ರಿಯಾಯಿತಿ ಸೌಲಭ್ಯ ನೀಡಲು ಸಾಧ್ಯವಾಗಿರುವುದಿಲ್ಲ.

(ಇ) ತಪ್ಪಿತಸ್ಥ ಅಧಿಕಾರಿ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು.

**772 (828) ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗ** (ರಾಮದುರ್ಗ) :–ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೆಳಗಾವಿ ಜಿಲ್ಲೆಗೆ ಕಳೆದ ಮೂರು ಸಾಲಿನಲ್ಲಿ ಜಲಾನಯನ ಇಲಾಖೆಯಿಂದ ಅನುಷ್ಠಾನಗೊಳಿಸಿದ ಯೋಜನೆಗಳಾವುವು ? ಅವುಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು).;

(ಆ) ಕಳೆದ ಮೂರು ವರ್ಷಗಳಿಂದ ರಾಮದುರ್ಗ ತಾಲ್ಲೂಕಿನಲ್ಲಿ ಜಲಾನಯನ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ? ಏಜನ್ಸಿ (ಎನ್.ಜಿ.ಓ) ಗಳಿಂದ ಅನುಷ್ಠಾನಗೊಳಿಸಿದ